# ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.

ಡಾ॥ ಬಾಬು ಜಗಜೀವನ್‌ರಾಂ ಭವನ, ಆದಿಪಂಪ ರಸ್ತೆ, ನಾರಾಯಣಸ್ವಾಮಿ ಬ್ಲಾಕ್, ಪಡುವಾರಹಳ್ಳಿ ಪೂರ್ವ ಬಡಾವಣೆ, ಮೈಸೂರು-02

E-mail – dobcmmysore1@gmail.com Ph No:0821- 2342917


ಸಂ:ಹಿಂವಕಇ/ಬಿ3/ಸಿಆರ್-78(2)/2017-18 ದಿನಾಂಕ:11-01-2018

## ಪ್ರಕಟಣೆ

**ವಿಷಯ:-** ಮೈಸೂರು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಅಡುಗೆಯರವರು ಮತ್ತು ಅಡುಗೆ ಸಹಾಯಕರ ಹುದ್ದೆಗೆ ನೇಮಕಾತಿ ಮಾಡುವ ಕುರಿತು.

**ಉಲ್ಲೇಖ:-1.** ಈ ಕಛೇರಿ ಅಧಿಸೂಚನೆ ಸಂಖ್ಯೆ: ಹಿಂವಕಇ/ಬಿ3/ಸಿಬ್ಬಂದಿ/ಸಿಆರ್-91/ 2016-17 ದಿನಾಂಕ:20-10-2016

**2.** ಸರ್ಕಾರದ ಆದೇಶ ಸಂಖ್ಯೆ:ಹಿಂವಕ 12 ಬಿಇಟಿ 2018 ಬೆಂಗಳೂರು ದಿನಾಂಕ: 08-01-2018

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅಧಿಸೂಚನೆಯನ್ವಯ ಅಡುಗೆಯವರು ಮತ್ತು ಅಡುಗೆ ಸಹಾಯಕರ ಹುದ್ದೆಗೆ ಅರ್ಜಿಯನ್ನು ಅಭ್ಯರ್ಥಿಗಳು ಸಲ್ಲಿಸಿರುತ್ತಾರೆ. ಅದರಂತೆ, ನಿಯಮಾನುಸಾರ ದಾಖಲೆಗಳ ಪರಿಶೀಲನೆ, ಅಡುಗೆಯವರು ಮತ್ತು ಅಡುಗೆ ಸಹಾಯಕರ ಪ್ರಾಯೋಗಿಕ ಪರೀಕ್ಷೆ ನಡೆಸಿ, ಅರ್ಹತೆ ಪಡೆದಿರುವ ಹಿನ್ನೆಲೆಯಲ್ಲಿ ಮೂಲದಾಖಲೆಗಳನ್ನು ಪಡೆದುಕೊಂಡು ಅಭ್ಯರ್ಥಿಗಳನ್ನು ಅಡುಗೆಯವರು ಮತ್ತು ಅಡುಗೆ ಸಹಾಯಕರ ಹುದ್ದೆಗೆ ಆಯ್ಕೆ ಮಾಡಲಾಗಿರುತ್ತದೆ. ಮುಂದುವರೆದಂತೆ, ಈ ರೀತಿ ಆಯ್ಕೆಯಾಗಿರುವ ಹುದ್ದೆಗೆ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸುವ ಸಂಬಂಧ ಉಲ್ಲೇಖ(2)ರಲ್ಲಿ ಸರ್ಕಾರದಿಂದ ನಿರ್ದೇಶನ ನೀಡಲಾಗಿರುತ್ತದೆ.

ಅದರಂತೆ, **ಡಾ॥ ಬಾಬು ಜಗಜೀವನ್‌ರಾಂ ಭವನ, ಆದಿಪಂಪ ರಸ್ತೆ, ನಾರಾಯಣಸ್ವಾಮಿ ಬ್ಲಾಕ್, ಪಡುವಾರಹಳ್ಳಿ ಪೂರ್ವ ಬಡಾವಣೆ, ಮೈಸೂರು-02. ಇಲ್ಲಿ ದಿನಾಂಕ:18-01-2018 ರಂದು ಬೆಳಗ್ಗೆ 9.00 ಗಂಟೆಯಿಂದ 12.00 ಗಂಟೆವರೆಗೆ** ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸಲು ಸಮಯ ಹಾಗೂ ಸ್ಥಳ ನಿಗದಿಪಡಿಸಲಾಗಿರುತ್ತದೆ.

ಅದರಂತೆ, ಅಭ್ಯರ್ಥಿಯು ಖುದ್ದು ಹಾಜರಾಗಿ ಜೇಷ್ಠತೆಯನುಸಾರ ಕೌನ್ಸಿಲಿಂಗ್ ನಡೆಸುವಾಗ ಸ್ಥಳ ಆಯ್ಕೆ ಮಾಡಬೇಕಾಗಿರುತ್ತದೆ. ಒಂದು ವೇಳೆ ಸದರಿ ದಿನಾಂಕದಂದು ಗೈರು ಹಾಜರಾದಲ್ಲಿ ಅಥವಾ ನಿಗಧಿತ ಸಮಯಕ್ಕೆ ಬಾರದೇ ಇದ್ದಲ್ಲಿ, ಜೇಷ್ಠತೆ ಪಟ್ಟಿಯಿಂದ ಅಭ್ಯರ್ಥಿಗಳನ್ನು ಕೈಬಿಟ್ಟು ಮುಂದಿನ ಅಭ್ಯರ್ಥಿಗೆ ಅವಕಾಶ ಮಾಡಿಕೊಡಲಾಗುವುದು ಎಂದು ತಿಳಿಸಲಾಗಿದೆ.

ಸದಸ್ಯ ಕಾರ್ಯದರ್ಶಿ
ಜಿಲ್ಲಾ ಮಟ್ಟದ ಗ್ರೂಪ್-ಡಿ ನೇಮಕಾತಿ
ಪ್ರಾಧಿಕಾರ ಹಾಗೂ ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಮೈಸೂರು ಜಿಲ್ಲೆ, ಮೈಸೂರು.